ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/26/2015-16. ದಿನಾಂಕ 20-09-2016.

| ವಾದಿಗಳು | ಪ್ರತಿವಾದಿಗಳು |
|---|---|
| ಬಿ.ನಾಗರಾಜ ತಂದೆ ಹನುಮಂತಪ್ಪ<br>ಎ.ದಿಬ್ಬದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ನಿಂಗಪ್ಪ ತಂದೆ ಹನುಮಂತಪ್ಪ<br>ಎ.ದಿಬ್ಬದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹರುವದಿ ಗ್ರಾಮದ ಸನಂ 122ಬಿ. ವಿಸ್ತೀರ್ಣ 2-79. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹರುವದಿ ಗ್ರಾಮದ ಸನಂ 122ಬಿ. ವಿಸ್ತೀರ್ಣ 2-79. ಎಕ್ರೆ ಜಮೀನನ್ನು ಸದರಿ ಗ್ರಾಮದ ಬಿ.ನಾಗರಾಜ ತಂದೆ ಹನುಮಂತಪ್ಪ ಇವರು ದಿನಾಂಕ 03-06-2013 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹರುವದಿ ಇವರು ನಮೂನೆ-21 ನೋಟಿಸನ್ನು ದಿನಾಂಕ 18-06-2012. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ನಿಂಗಪ್ಪ ತಂದೆ ಹನುಮಂತಪ್ಪ ಇವರು ಸಹಿ ಮಾಡಲು ನಿರಾಕರಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 12/2012-13. ದಿನಾಂಕ 19-07-2012. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 25-08-2015. ರಿಂದ 20-09-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಹಾಗೂ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಹರುವದಿ ಗ್ರಾಮದ ಸನಂ 122ಬಿ. ವಿಸ್ತೀರ್ಣ 2-79. ಎಕ್ರೆ ಜಮೀನು ನಮ್ಮ ತಂದೆಯವರಾದ ಹನುಮಂತಪ್ಪ ತಂದೆ ಮಲ್ಲಪ್ಪ ಮತ್ತು ದೊಡ್ಡಪ್ಪನಾದ ನಿಂಗಪ್ಪ ತಂದೆ ನಾಗಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಇವರು ತಮ್ಮ ಸ್ವ ಇಚ್ಚೇಯಿಂದ ದಿನಾಂಕ 03-06-2013 ರಂದು ನನ್ನ ಹೆಸರಲ್ಲಿ ಪಾಲು ವಿಭಾಗದ ಒಪ್ಪಿಗೆ ಪತ್ರವನ್ನು ಉಭಯರು ಬರೆದು ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರದಂತೆ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರಿಗೆ ನೋಟಿಸ್ಸು ಜಾರಿ ಮಾಡಲಾಗಿದ್ದರೂ ಹಾಜರಾಗಿ ತಮ್ಮ ತಕರಾರು ಬಗ್ಗೆ ಯಾವುದೇ ಹೇಳಿಕೆಗಳನ್ನಾಗಲಿ ಮತ್ತು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ

ಪು.ತಿ.ನೋ:-2.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ವಿಚಾರಣೆಯಲ್ಲಿ ಯಾವುದೇ ಆಸಕ್ತಿ ತೋರದೇ ಇರುವುದರಿಂದ ವಿವಾದಿತ ಜಮೀನು ಅರ್ಜಿದಾರರ ತಂದೆಯು ಖರೀದಿಸಿದ್ದು ಖರೀದಿಸಿದ್ದ ಜಮೀನು ಆಗಿದ್ದರಿಂದ ತಕರಾರುದಾರರ ಅರ್ಜಿಯನ್ನು ತಳ್ಳಿಹಾಕಿ ಅರ್ಜಿದಾರರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹರುವದಿ ಗ್ರಾಮದ ಸನಂ 122ಬಿ. ವಿಸ್ತೀರ್ಣ 2–79. ಎಕ್ರೆ ಜಮೀನನ್ನು ದಿನಾಂಕ 03–06–2013 ರ ಪಾಲು ವಿಭಾಗದ ಒಪ್ಪಿಗೆ ಪತ್ರ ಪ್ರಕಾರ ಅರ್ಜಿದಾರರಾದ ಬಿ.ನಾಗರಾಜ ತಂದೆ ಹನುಮಂತಪ್ಪ ಎ.ದಿಬ್ಬದಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20–09–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಬಿ.ನಾಗರಾಜ ತಂದೆ ಹನುಮಂತಪ್ಪ ಎ.ದಿಬ್ಬದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ನಿಂಗಪ್ಪ ತಂದೆ ಹನುಮಂತಪ್ಪ ಎ.ದಿಬ್ಬದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.